**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿ: 1301/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಶ್ರೀಧರ್ | ಪ್ರಾ.ಸಾ: 1 |
| ತಂದೆಯ/ಗಂಡನ ಹೆಸರು | | ನಾಗರಾಜು | ಚಾಸಾ: 1 |
| ವಯಸ್ಸು | | 52 | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ನಂಜನಗೂಡು | ದಿ:10.10.2022 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದ:**

ಚಾಸಾ 2 ನನ್ನ ಅತ್ತಿಗೆ, ಚಾಸಾ 3 ನನ್ನ ದೊಡ್ಡಪ್ಪನ ಮಗ, ಚಾಸಾ 4 ನನ್ನ ಚಿಕ್ಕಮ್ಮ, ಅಪಘಾತದಲ್ಲಿ ಮೃತಪಟ್ಟ ರುಚಿತಾ ನನ್ನ ತಂಗಿಯ ಮಗಳು. ನಮಗೆ ಬ್ಯಾಳಾರಹುಂಡಿ ಗ್ರಾಮದಲ್ಲಿ ಜಮೀನು ಇದ್ದು ದಿನಾಂಕ 25.02.2014 ರಂದು ನಾನು ಜಮೀನಿನ ಬಳಿ ಹೋಗುತ್ತಿದ್ದೆನು. ಚಾಸಾ 2 ರವರು ಕೆಎ 09 ಇ ಜೆಡ್ 1447 ರ ಹಿರೋ ಪ್ಲೇಜರ್ ಬೈಕನ್ನು ಚಾಸಾ 2 ರವರು ಚಾಲನೆ ಮಾಡುತ್ತಿದ್ದು ಅವರ ಹಿಂದೆ ಮೃತ ರುಚಿತಾ ರವರು ಕುಳಿತಿದ್ದರು. ಚಾಸಾ 2 ರವರು ಚಾಸಾ 4 ರವರಿಗೆ ಜಮೀನಿನ ಬಳಿ ತಿಂಡಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಹಿಂಬದಿಯಿಂದ ನಂಜನಗೂಡಿನಿಂದ ಹುಲ್ಲಹಳ್ಳಿಗೆ ಹೋಗುತ್ತಿದ್ದ ಕೆಎ 02 ಸಿ 99 ರ ಚಾಮುಂಡಿ ಬಸ್ಸನ್ನು ಅತಿ ವೇಗ ಮತ್ತು ಅಜಾಗರೂಕರತೆಯಿಂದ ಚಾಲನೆ ಮಾಡಿಕೊಂಡು ಬಂದಿದ್ದು ಚಾಸಾ 2 ರವರು ಚಾಸಾ 4 ರವರ ಬಳಿ ವಾಹನವನ್ನು ನಿಲ್ಲಿಸಲು ಹೋದಾಗ ಡಿಕ್ಕಿಪಡಿಸಿರುತ್ತಾರೆ. ಅದರ ಪರಿಣಾಮ ರುಚಿತಾ ರವರು ರಸ್ತೆಗೆ ಬಿದ್ದದ್ದು ಅವರಿಗೆ ತೀವ್ರ ಸ್ವರೂಪದ ಗಾಯವಾಗಿರುತ್ತದೆ. ಚಾಸಾ 2 ರವರಿಗೆ ಸಣ್ಣ ಪ್ರಮಾಣದ ಗಾಯವಾಗಿರುತ್ತದೆ. ಚಾಸಾ 4 ರವರ ಬಲ ಮೊಣಕೈಗೆ ಗಾಯವಾಗಿರುತ್ತದೆ.

2. ನಂತರ ನಾನು ಮತ್ತು ಗ್ರಾಮಸ್ಥರು ಅಂಬ್ಯೂಲೆನ್ಸ್ ಗೆ ಕರೆ ಮಾಡಿ ಚಾಸಾ 2 ರಿಂದ 4 ರವರನ್ನು ನಂಜನಗೂಡು ಆಸ್ಪತ್ರೆಗೆ ಕಳುಹಿಸಿರುತ್ತೇವೆ. ನಂತರ ಮೈಸೂರಿನ ಅಪೋಲೊ ಆಸ್ಪತ್ರೆಗೆ ರುಚಿತರವರನ್ನು ಮತ್ತು ಚಾಸಾ 4 ರವರನ್ನು ಕರೆದುಕೊಂಡು ಹೋಗಿರುತ್ತೇವೆ. ನಾವು ಆಸ್ಪತ್ರೆಯಲ್ಲಿದ್ದ ಕಾರಣ ಬರಲಾಗಿರಲಿಲ್ಲ. ಹಾಗಾಗಿ

ದಿನಾಂಕ 27.02.2014 ರಂದು ಠಾಣೆಗೆ ಬಂದು ದೂರನ್ನು ನೀಡಿರುತ್ತೇವೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಇದನ್ನು ನಿಪಿ 01 ಎಂದು ಸಹಿಯನ್ನು ನಿಪಿ 01 (ಎ) ಎಂದು ಗುರುತಿಸಲಾಯಿತು.

3. ದೂರನ್ನು ನೀಡಿದ ನಂತರ ಪೊಲೀಸರು ಬೆಳಗ್ಗೆ 11.00 ಗಂಟೆಗೆ ಸ್ಥಳಕ್ಕೆ ಬಂದಿದ್ದು ಬೆಳಗ್ಗೆ 11.00 ರಿಂದ 12.00 ರವರೆಗೆ ನನ್ನ ಮತುತ ಚಾಸಾ 5 ಮತ್ತು 6 ರವರ ಸಮಕ್ಷಮ ಮಹಜರ್ ನ್ನು ಜರುಗಿಸಿರುತ್ತಾರೆ. ಸದರಿ ಮಹಜರ್ ಕಾಲಕ್ಕೆ ಅಪಘಾತಕ್ಕೆ ಒಳಪಟ್ಟ ವಾಹನದ ಛಾಯಾ ಚಿತ್ರವನ್ನು ಅಪಘಾತ ಸಂಭವಿಸಿದ ಸ್ಥಳದ ಕುರಿತು ದಾಖಲೆ ಮಾಡಿಕೊಂಡಿರುತ್ತಾರೆ. ಅಪಘಾತ ಮಾಡಿದ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ಮಹಜರ್ ನ್ನುನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ರುಚಿತಾರವರು ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 28.03.2014 ರಂದು ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ದಿನಾಂಕ 20.04.2014 ರಂದು ನ್ಯಾಯಾಲಯದ ಮುಂದಿರುವ ಆರೋಪಿ ಮಂಟರವರೇ ಅಪಘಾತಪಡಿಸಿದ ಬಸ್ಸಿನ ಚಾಲಕರಾಗಿರುತ್ತಾರೆ ಎಂದು ಆರೋಪಿಯನ್ನು ಗುರತಿಸಿ ಮರುಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ಅಪಘಾತಪಡಿಸಿದ ಚಾಮುಂಡಿ ಬಸ್ಸನ್ನು ಛಾಯಾ ಚಿತ್ರಗಳಲ್ಲಿ ನೋಡಿ ಗುರುತಿಸಿದ್ದು ಇದನ್ನು ನಿಪಿ 3 ರಿಂದ 5 ಎಂದು ಗುರುತಿಸಲಾಯಿತು. ಚಾಸಾ 2 ರವರ ಚಾಲನೆ ಮಾಡುತ್ತಿದ್ದ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸ್ ಎಸ್ ಬಿ ವಕೀಲರಿಂದಃ**

4. ಅಪಘಾತ ನಡೆದ ದಿನಾಂಕದಂದು ನಾನು ನಂಜನಗೂಡಿನಿಂದ ಬ್ಯಾಳಾರುವಿನ ನನ್ನ ಜಮೀನಿಗೆ ಹೋಗುತ್ತಿದ್ದೆನು. ನಾನು ನಂಜನಗೂಡಿನಲ್ಲಿ ವಾಸವಿದ್ದೆನು. ನಾನು ಬೆಳಗ್ಗೆ 07.30 ಕ್ಕೆ ಮನೆಯನ್ನು ಬಿಟ್ಟಿರುತ್ತೇನೆ. ನನ್ನ ಜೊತೆ ಯಾರು ಇರಲಿಲ್ಲ. ನಮ್ಮ ಮನೆಯಿಂದ ನಮ್ಮ ಜಮೀನಿಗೆ ಹೋಗಲು 10 ರಿಂದ 15 ರಿಂದ ಬೇಕಾಗುತ್ತದೆ. ಚಾಸಾ 2 ರವರು ಎಷ್ಟು ಗಂಟೆಗೆ ಮನೆಯನ್ನು ಬಿಟ್ಟಿರುತ್ತಾರೆ ಎಂದು ಗೊತ್ತಿಲ್ಲ. ನಾನು 50 ಮೀಟರ್ ಅಂತರದಲ್ಲಿ ಅಪಘಾತವನ್ನು ನೋಡಿರುತ್ತೇನೆ. ನನ್ನ ಸಮಕ್ಷಮದಲ್ಲಿಯೇ ಅಪಘಾತ ಏರ್ಪಟ್ಟಿರುತ್ತದೆ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಸಾಕ್ಷಿ 50 ಮೀ. ಅಂತರದಿಂದ ನೋಡಿದ್ದೇನೆ ಎಂದು ಹೇಳುತ್ತಾರೆ. ನಾನು ನಂಜನಗೂಡಿನಿಂದ ಬ್ಯಾಳಾರು ಗ್ರಾಮಕ್ಕೆ ಹೋಗುತ್ತಿದ್ದೆನು.

5. ಬಸ್ಸು ನಂಜನಗೂಡಿನಿಂದ ಹುಲ್ಲಹಳ್ಳಿಯ ಕಡೆಗೆ ಹೋಗುತ್ತಿತ್ತು. ನಮ್ಮ ಜಮೀನು ರಸ್ತೆಯ ಬಲಭಾಗಕ್ಕಿದೆ. ಚಾಸಾ 2 ರವರು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದರು. ಚಾಸಾ 2 ರವರು ನನ್ನಿಂದ 50 ಮೀ. ಅಂತರದಲ್ಲಿ ರಸ್ತೆಯ ಎಡಭಾಗದಲ್ಲಿ ವಾಹನವನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಚಾಸಾ 4 ರವರು ರಸ್ತೆಯ ಎಡಭಾಗದಲ್ಲಿದ್ದರು. ರಸ್ತೆಯ ಬಲಭಾಗಕ್ಕೆ ಕೆರೆ ಇದೆ. ರಸ್ತೆಯ ಎಡಭಾಗಕ್ಕೆ ಜಮೀನುಗಳಿವೆ. ಚಾಸಾ 4 ರವರು ರಸ್ತೆಯ ಎಡಭಾಗದಲ್ಲಿಯೇ ಇದ್ದರು. ಚಾಸಾ 4 ರವರು ರಸ್ತೆಯ ಎಡಭಾಗದಲ್ಲಿ ನಿಂತಿರಲಿಲ್ಲ ಬದಲಾಗಿ ಬಲಭಾಗದಲ್ಲಿರುವ ಕೆರೆಯ ಏರಿಯ ಮೇಲೆ ನಿಂತಿದ್ದರು ಎಂದರೆ ಸರಿಯಲ್ಲ. ನಿಪಿ 1 ರ ದೂರನ್ನು ನಾನೇ ನೀಡಿದ್ದು, ದೂರಿನಲ್ಲಿ ನಮೂದಿಸಿರುವ ಅಂಶಗಳು ಸರಿ ಇದೆ. ದೂರಿನಲ್ಲಿ ಬ್ಯಾಳಾರು ಗ್ರಾಮದ ಪಕ್ಕದಲ್ಲಿರುವ ಕೆರೆಯ ಏರಿಯ ಮೇಲೆ ನಮ್ಮ ಚಿಕ್ಕಮ್ಮ ನಿಂತಿದ್ದರು ಎಂದು ಉಲ್ಲೇಖಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ರಸ್ತೆಯ ಎಡಭಾಗವನ್ನು ಕೂಡ ಕೆರೆಯ ಏರಿ ಎಂದು ಕರೆಯುತ್ತೇವೆ ಎಂದು ಹೇಳುತ್ತಾರೆ. ಪೊಲೀಸರು ತಯಾರಿಸಿರುವ ಕಚ್ಚಾ ನಕ್ಷೆಯಲ್ಲಿ ಕೂಡ ರಸ್ತೆಯ ಉತ್ತರಕ್ಕೆ ತಾವರೆ ಕೆರೆ ಎಂದು ನಮೂದು ಇದೆ ಎಂದರೆ ಸರಿ. ದೂರಿನಲ್ಲಿ ನಮೂದಿಸಿರುವಂತೆ ವಿನುತರವರು ರಸ್ತೆಯ ಅಂಚಿಗೆ ಸ್ಕೂಟರನ್ನು ನಿಲ್ಲಿಸಲು ಹೋಗುತ್ತಿದ್ದರು ಎಂಬುದರ ಅರ್ಥ ರಸ್ತೆಯ ಎಡಭಾಗಕ್ಕೆ ನಿಲ್ಲಿಸಲು ಎಂದು ಇರುತ್ತದೆ.

6. ಚಾಸಾ 4 ರವರು ರಸ್ತೆಯ ಬಲಭಾಗದಲ್ಲಿ ನಿಂತಿದ್ದು, ಅವರು ಚಾಸಾ 2 ರವರನ್ನು ಕರೆದಾಗ ಚಾಸಾ 2 ರವರು ಏಕಾ ಏಕಿ ತಮ್ಮ ವಾಹನವನ್ನು ಬಲಭಾಗಕ್ಕೆ ತೆಗೆದುಕೊಳ್ಳಲು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 2 ರವರು ವಾಹನವನ್ನು ಹಿಂಬದಿಯಿಂದ ಬರುತ್ತಿದ್ದ ಬಸ್ಸನ್ನು ಗಮನಿಸದೆ ಏಕಾ ಏಕಿ ಬಲಭಾಗಕ್ಕೆ ತೆಗೆದುಕೊಂಡ ಕಾರಣ ಚಾಸಾ 2 ರವರ ನಿರ್ಲಕ್ಷತೆಯಿಂದ ಅಪಘಾತ ಏರ್ಪಟ್ಟಿದ್ದು ಆರೋಪಿತನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ನಡೆದ ಸ್ಥಳ ಗುಂಡಿಗಳಿಂದ ಕೂಡಿತ್ತು ಎಂದರೆ ಸರಿಯಲ್ಲ. ಅಪಘಾತ ನಡೆದ ಸ್ಥಳ ಕೆರೆಯ ಏರಿಯಾಗಿರುವ ಕಾರಣ ವಾಹನಗಳು ಅತಿ ವೇಗವಾಗಿ ಚಾಲನೆ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರವರಿಗೆ ಚಾಲನಾ ಪರವಾನಗಿ ಇದೆ. ಸದರಿ ದಾಖಲಾತಿಯನ್ನು ತನಿಖಾಧಿಕಾರಿಗೆ ನೀಡಿರುತ್ತಾರೆ. ಚಾಸಾ 2 ರವರ ಚಾಲನಾ ಪರವಾನಗಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು ದಿನಾಂಕ 27.02.2014 ರಂದು ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ನಾನು ಆಸ್ಪತ್ರೆಯಲ್ಲಿದ್ದ ಕಾರಣದಿಂದ ಅಪಘಾತ ನಡೆದ ದಿನದಂದೇ

ದೂರನ್ನು ನೀಡಲು ಆಗಿರಲಿಲ್ಲ. ಅಪಘಾತ ನಡೆದ ಸ್ಥಳದ ರಸ್ತೆಯು ದ್ವಿಮುಖ ರಸ್ತೆಯಾಗಿರುತ್ತದೆ. ಚಾಸಾ 2 ರವರೇ ಗಾಬರಿಗೊಂಡು ಅಪಘಾತಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಲ್ಲ ಎಂದರೆ ಸರಿಯಲ್ಲ. ಪರಿಹಾರವನ್ನು ಪಡೆದುಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ಅಜಾಗರೂಕತೆಯಿಂದ ಅಪಘಾತ ನಡೆದಿಲ್ಲ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**